(*b*) if so, when that work will be completed;

(*c*) the expenditure likely to be incurred in connection with the above work;

(*d*) the mileage of the above road which can be got tarred with the amount already provided for ?

A.—Sri H. K. VEERANNA GOWDH (Minister for Public Works).—

(*a*) The portion of the road from Yelandur to Mamballi is proposed to be tarred.

(*b*) During 1959-60.

(*c*) Rs. 1·14 lakhs as estimated.

(*d*) 8 miles 1 furlong.

ಶ್ರೀಮತಿ ಕೆಂಪಮ್ಮ.—ಪ್ರಶ್ನೆಯಲ್ಲಿ ಮರಳ್ಳಿಯಿಂದ ಮಾಂಬಳ್ಳಿಯವರೆಗೆ ಯಾವಾಗ ಟಾರು ರಸ್ತೆಗಳನ್ನು ಮಾಡುತ್ತೀರಿ ಎಂದು ಕೇಳಿದ್ದಕ್ಕೆ "ಯಳಂದೂರಿನಿಂದ ಮಾಂಬಳ್ಳಿಯವರೆಗೆ" ಎಂದು ಹೇಳಿರುವುದು ತಪ್ಪಲ್ಲವೇ ?

* ಶ್ರೀ ಎಚ್. ಕೆ. ವೀರಣ್ಣಗೌಡ.—'ಯಳಂದೂರು' ಎನ್ನುವುದು ತಪ್ಪಾಗಿ ಅಚ್ಚಾಗಿದೆ.

ಶ್ರೀಮತಿ ಕೆಂಪಮ್ಮ.—ಈ ಕೆಲಸವನ್ನು 1959-60 ರಲ್ಲಿ ಪೂರೈಸಲಾಗುವುದು ಎಂದು ಹೇಳಿದೆ. 1958-59 ರ ಒಳಗಾಗಿ ಏಕೆ ಈ ಕೆಲಸವನ್ನು ಪೂರೈಸಬಾರದು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕಷ್ಟ ಹೀಗಿದೆ· ಇದು ಕರಿಯಮಣ್ಣಿನ ನೆಲ. ಅದರಿಂದ ಮೊದಲು ಸಣ್ಣ ಸಣ್ಣ ಜಲ್ಲಿಗಳನ್ನು ಹಾಕಿ ಅನಂತರ ದಪ್ಪ ಕಲ್ಲುಗಳನ್ನು, ಬೋಲ್ಡರುಗಳನ್ನು ಹಾಕಬೇಕು, ಮೆಟಲ್ಲು ಹಾಕಬೇಕು. ಈ ರೀತಿಯಾಗಿ ಎಲ್ಲೆಲ್ಲಿ ಬ್ಲಾಕ್ ಕಾಟನ್ ಸಾಯಿಲ್ ಇದೆಯೋ ಅಲ್ಲೆಲ್ಲಾ ಇದೇ ರೀತಿಯ ಕಷ್ಟಗಳಾಗುತ್ತವೆ ಮತ್ತು ಇದರಿಂದ ಕೆಲಸ ಸ್ವಲ್ಪ ನಿಧಾನವಾಗಿ ಆಗುತ್ತದೆ.

Restoration of Tank in Otkur, Raichur Taluk.

Q.—2550. Sri G. BHIMANNA (Raichur).—

Will the Government be pleased to state :—

the steps taken for effecting repairs to the breached tank in Otkur, Raichur taluk ?

A.—Sri H. K. VEERANNA GOWDH (Minister for Public Works).—

An estimate amounting to Rs. 21,000 has been sanctioned and work is being taken up shortly.

ಶ್ರೀ ಜಿ. ಭೀಮಣ್ಣ.—ಈ ಕೆಲಸದಿಂದ ಎಷ್ಟು ಜಮೀನು ಸಾಗುವಳಿಯಾಗುತ್ತದೆ ?

ಶ್ರೀ ಹೆಚ್. ಕೆ. ವೀರಣ್ಣಗೌಡ... 270 ಎಕರೆ 35 ಗುಂಟೆಗಳು.

ಶ್ರೀ ಜಿ. ಭೀಮಣ್ಣ.—21,000 ರೂಪಾಯಿಗಳಿಗೆ ಅಂದಾಜನ್ನು ಮಾಡಲಾಗಿದೆ ಎಂದು ಹೇಳಿರುವುದರಲ್ಲಿ ಎಷ್ಟರಮಟ್ಟಿನ ಕೆಲಸವಾಗಿದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಟೆಂಡರನ್ನು ಕರೆದಿದೆ. ಆ ಟೆಂಡರುಗಳನ್ನು ನೋಡಿ ಒಪ್ಪಿಕೊಂಡು ಅನಂತರ ಕಂಟ್ರಾಕ್ಟರಿಗೆ ಕೊಟ್ಟು ಕೆಲಸಮಾಡಿಸಬೇಕಾಗಿದೆ.

ಶ್ರೀ ಜಿ. ಭೀಮಣ್ಣ.—ಈ ವರ್ಷವೇ ಈ ಕಾರ್ಯವನ್ನು ಮುಗಿಸುವುದಾಗಿ ಆಶ್ವಾಸನೆಯನ್ನು ಕೊಡಲಾಗುತ್ತದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಲ್ಪ ಹೆಚ್ಚು ಕಡಮೆ ಈ ವರ್ಷವೇ ಮುಗಿಸಬೇಕೆಂದಿದೆ.

ಶ್ರೀಮತಿ ಬಸವರಾಜೇಶ್ವರಿ.—ಕೆರೆ ಒಡೆದಿದ್ದರೆ ಬಾಗಾಯ್ತು ಎಂದು ಹಣವನ್ನು ವಸೂಲುಮಾಡುತ್ತಿರುವುದು ಗೊತ್ತಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—1956-57ರಲ್ಲಿ ಎಂದರೆ ಹೋದವರ್ಷವೇ ಕೆರೆ ಒಡೆದಿದೆ. ಒಂದು ವರ್ಷದ ಕಂದಾಯವನ್ನು ವಸೂಲುಮಾಡಿರಬಹುದು. ಕೆಲವು ಕಡೆಗಳಲ್ಲಿ ಇಪ್ಪತ್ತು ಮೂವತ್ತು ವರ್ಷಗಳಿಂದಲೂ ತರಿ ಕಂದಾಯವನ್ನು ವಸೂಲುಮಾಡಿರುವ ಉದಾಹರಣೆಗಳೂ ಇರಬಹುದು.

Inconvenience caused due to continuance of Urdu in official correspondence in Hyderabad Karnatak.

Q.—2568. Smt. BASAVARAJESHWARI (Manvi).—

Will the Government be pleased to state :—

(*a*) whether they are aware of the great inconvenience caused to Kannada speaking people in the Hyderabad Karnatak area on account of the continued use of Urdu in all official correspondences;

(*b*) whether it is a fact that the work in the Secretariat is handicapped greatly on account of Urdu correspondence coming up from the Hyderabad Karnataka area;

(*c*) whether they propose to issue instructions to all Government officers in Hyderabad Karnatak area to discontinue the use of Urdu in official correspondence and make greater use of Kannada in its place ?

A.—Sri S. NIJALINGAPPA (Chief Minister).—

(*a*) It may be that some section of the public feel some inconvenience on account of the use of Urdu in some of

(SRI S. NIJALINGAPPA)

the subordinate offices in the integrated districts of the former Hyderabad State. Urdu has been in use in these districts as official language for a number of years and most of the literate persons there, are conversant with that language. However, apart from Urdu, Kannada and English are also in vogue in the subordinate offices in that area and efforts are being made to use Kannada as the official language in these districts. The process, however, has to be gradual.

(*b*) The officers in that area correspond in English with the Secretariat and other higher offices. Hence no inconvenience as such is caused in the Secretariat.

(*c*) This matter is under the consideration of Government.

2 P.M.

ಶ್ರೀಮತಿ ಬಸವರಾಜೇಶ್ವರಿ.—ಪ್ರಶ್ನೆಯ (ಎ) ಭಾಗದ ಉತ್ತರದಲ್ಲಿ "Efforts are being made to use Kannada as the official language in these districts" ಎಂದು ಹೇಳಿದ್ದಾರೆ. ಯಾವ ಯಾವ efforts ಮಾಡಿದ್ದಾರೆ ?

*ಶ್ರೀ ಎಸ್. ನಿಜಲಿಂಗಪ್ಪ.—ಈಗ ಬರತಕ್ಕ ಪತ್ರ ವ್ಯವಹಾರವೆಲ್ಲ ಸಾಧಾರಣವಾಗಿ ಕನ್ನಡದಲ್ಲಿಯೇ ಇರಬೇಕು ಎಂದು ಹೇಳಿದ್ದೇವೆ. ಅದೊಂದೇ ಮಾಡ ಬೇಕಾದದ್ದು.

ಶ್ರೀಮತಿ ಬಸವರಾಜೇಶ್ವರಿ.—ಅಮಲ್ದಾರರ ಕಚೇರಿಯಿಂದ ಕೆಳಗಿನ ಮಟ್ಟದವರಿಗೆ ಇವೊತ್ತಿನ ವರೆಗೂ ಎಲ್ಲ files and correspondence ಉರ್ದು ಭಾಷೆಯಲ್ಲಿ ನಡೆಯುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಎಲ್ಲ ಹಾಗೆಯೇ ಇತ್ತು.

ಶ್ರೀಮತಿ ಬಸವರಾಜೇಶ್ವರಿ.—ಸದ್ಯದಲ್ಲಿ ಕೂಡ ಹಾಗೆಯೇ ಆಗುತ್ತಿದೆ. ಕನ್ನಡದಲ್ಲಿ ದರಖಾಸ್ತು ಕೊಟ್ಟಿದ್ದನ್ನು ಮೂಲೆಗೆ ಹಾಕಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆಗಿರಬಹುದು ; ನನ್ನ ಗಮನಕ್ಕೆ ಬಂದಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಉರ್ದು ಭಾಷೆ ಬರುವವರಿಗೆ ಇಂಗ್ಲಿಷ್ ಭಾಷೆಯೂ ಬರುತ್ತದೆ. ಅವರನ್ನು ಈ ಕಡೆಗೆ ವರ್ಗಾಯಿಸಿ ಕನ್ನಡ ಬರು ವವರನ್ನು ಆ ಭಾಗಕ್ಕೆ ಹಾಕುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚನೆ ಕೊಟ್ಟಿದ್ದಾರೆ. ಅದನ್ನು ನೋಡೋಣ.

ಶ್ರೀ ಎಫ್. ಎಚ್. ಮೊಹಸಿನ್.—ಅಲ್ಲಿರತಕ್ಕ ಜನ ರೆಲ್ಲರೂ ಉರ್ದು ಭಾಷೆಯನ್ನು ಬಲ್ಲವರಾಗಿದ್ದಾರೆ ಎಂದು ಕಾಣಿಸಿದ್ದೀರಿ. ಆದರೂ ಸಹ ಉರ್ದುವನ್ನು ಬಿಟ್ಟು ಕನ್ನಡಕ್ಕೆ ಮಾರ್ಪಾಡು ಮಾಡುವ ಉದ್ದೇಶ ವನ್ನು ಸರ್ಕಾರದವರು ಏಕೆ ಇಟ್ಟುಕೊಂಡರು ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರಿಗೂ ಉರ್ದು ಬರುತ್ತದೆಂದು ಹೇಳಿಲ್ಲ. ಅನೇಕರಿಗೆ ಬರುತ್ತದೆ ಎಂದು ಹೇಳಿದ್ದೇನೆ. ಈಗ ಕನ್ನಡ official language ಆಗಿರುವುದರಿಂದ ಅದನ್ನು ಹೆಚ್ಚಿಗೆ ಉಪಯೋಗಿಸಬೇಕಾಗುತ್ತದೆ.

ಶ್ರೀ ಎಫ್. ಎಚ್. ಮೊಹಸಿನ್.—ಇದೇ ರೀತಿ ಬೆಳಗಾಂವಿಗೂ ಅನ್ವಯವಾಗುವುದೋ ?

MR. SPEAKER.—That is a different question. This is only about Hyderabad.

ಶ್ರೀ ಟಿ. ಹನುಮಯ್ಯ.—ಇಲ್ಲಿ ಕನ್ನಡ ಪಾಠಶಾಲೆ ಗಳಿವೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಇದರೊಳಗೆ ಬರುವುದಿಲ್ಲ.

SRI J. H. SHAMSUDDIN.—Is any representation received by the Government about Hyderabad ?

SRI S. NIJALINGAPPA.—There are some expressions made that it is inconvenient.

ಶ್ರೀ ಇ. ಷಂಡಲೀಕಪ್ಪ.—ಹೈದರಾಬಾದ್ ಕರ್ಣಾಟಕದಲ್ಲಿ ಕೆಲವು ಆಫೀಸುಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡ ಬಾರದೆ ಉರ್ದು ಮಾತ್ರ ಬರುವವರು ಇದ್ದಾರೆ. ಅವರಿಗೆ ರಿಟೈರ್ ಆಗಲು ಇನ್ನೂ ಬಹಳ ವರ್ಷಗಳಿವೆ. ಈ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಮೂಲ ಪ್ರಶ್ನೆಗೆ ಸಂಬಂಧ ಪಟ್ಟಿಲ್ಲ.

ಶ್ರೀ ಬಿ. ಕೆ. ನಾಗೂರ್.—ಹೈದರಾಬಾದ್ ಜನರಿಗೆ ಉರ್ದು ಮಾತ್ರ ಬರುವುದರಿಂದ ತೊಂದರೆಯಾಗಿದೆ ಎಂದು ಅವರನ್ನು ಇತರ ಕಡೆಗಳಿಗೆ ವರ್ಗಮಾಡಬೇಕು ಮತ್ತು ಈಕಡೆಯವರನ್ನು ಅಲ್ಲಿಗೆ ವರ್ಗಮಾಡಬೇಕು ಎಂದರೆ ಈಕಡೆಯ ಜನಗಳಿಗೆ ತೊಂದರೆಯಾಗುತ್ತ ದೆನ್ನುವುದು ತಮಗೆ ಗೊತ್ತಿದೆಯೇ ?

ಅಧ್ಯಕ್ಷರು.—ವರ್ಗಾವಣೆಯ ಪ್ರಶ್ನೆ ಮುಖ್ಯ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

SRI G. ANNA RAO.—May I know whether Tahasil officers are addressing letters in Urdu to the Deputy Commissioners and they are being translated in the Deputy Commissioner's office and this has resulted in duplication of work ?

SRI S. NIJALINGAPPA.—To some extent it is necessary. We cannot avoid it for some time.

SRI MAQSOOD ALI KHAN.—Is it no a fact that the majority of population feels that it is convenient to carry on correspondence in Urdu ?

SRI S. NIJALINGAPPA.—It is not quite convenient.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆಫೀಸುಗಳಲ್ಲಿ ಕೆಲಸಮಾಡುವವರಿಗೆ ಉರ್ದು ಬರುವುದರಿಂದ ಕನ್ನಡ ಬರತಕ್ಕ ಅನೇಕರಿಗೆ ತೊಂದರೆಯಾಗುತ್ತದೆ. ಇದಕ್ಕೆ

ಉರ್ದು ಬರುವವರು ಕನ್ನಡವನ್ನು ಕಲಿಯಬೇಕೆಂದು ನಿರ್ಬಂಧ ಮಾಡಿದ್ದೀರಾ?

ಅಧ್ಯಕ್ಷರು.—ಅವರಿಗೆಲ್ಲ ಬರುತ್ತದೆ. ತಾವು ಆಕಡೆ ಹೋಗಿ ನೋಡಿದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಅವರಿಗೆ ಮಾತ ನಾಡುವುದಕ್ಕೆ ಬರಬಹುದು. ಬರೆಯುವುದನ್ನು ಕಲಿಯಲು ಏರ್ಪಾಡು ಮಾಡುತ್ತೀರಾ?

ಅಧ್ಯಕ್ಷರು.—ಕನ್ನಡ ಎಲ್ಲರಿಗೂ ಬರುತ್ತದೆ.

Sri G. B. SHANKAR RAO.—Is it not incumbent upon the Government to issue instructions to the officials of Hyderabad Karnatak to learn Kannada as it is the regional language?

Sri S. NIJALINGAPPA.—We will try to encourage Kannada as far as possible.

ಶ್ರೀ ಟಿ. ಹನುಮಯ್ಯ.—ಆ ಭಾಗದ ಆಫೀಸುಗಳಲ್ಲಿ ಉರ್ದು ಭಾಷೆಯ ವಿನಾ ಇತರ ಯಾವ ಭಾಷೆಯೂ ಬಾರದೆ ಇರತಕ್ಕ ನೌಕರರಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಗಮನದಲ್ಲಿದೆ.

ಶ್ರೀ ಟಿ. ಹನುಮಯ್ಯ.—ಹಾಗೆ ಉರ್ದು ಭಾಷೆಯಲ್ಲಿ ಬರುವುದನ್ನು ಭಾಷಾಂತರ ಮಾಡುವುದಕ್ಕೆ ವಿಧಾನಸೌಧದಲ್ಲಿ ಒಂದು ಇಲಾಖೆಯನ್ನು ಇಡಬೇಕಲ್ಲವೆ?

ಅಧ್ಯಕ್ಷರು. ಇಂಗ್ಲೀಷಿನಲ್ಲಿ ವ್ಯವಹಾರ ಮಾಡುತ್ತಾರೆಂದು ಉತ್ತರದಲ್ಲಿದೆ.

ಶ್ರೀ ಟಿ. ಹನುಮಯ್ಯ.—ಅಲ್ಲಿ ಇಂಗ್ಲಿಷ್ ತಿಳಿಯದವರಿದ್ದಾರೆ. ಅವರ ವಿಚಾರವಾಗಿ ಕೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಪತ್ರವ್ಯವಹಾರ ಮಾಡುವುದಕ್ಕೆ ಸಂಬಂಧಪಟ್ಟವರಿಗೆಲ್ಲ ಇಂಗ್ಲಿಷ್ ಮತ್ತು ಉರ್ದು ಎರಡು ಭಾಷೆಗಳೂ ಬರುವುದರಿಂದ ಕಷ್ಟವಿಲ್ಲ.

ಶ್ರೀ ಟಿ. ಹನುಮಯ್ಯ.—ಆ ಭಾಗದಲ್ಲಿ ಕನ್ನಡ ಪ್ರೈಮರಿ ಶಾಲೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ?

ಅಧ್ಯಕ್ಷರು.—ಕನ್ನಡ ಪಾಠಶಾಲೆಗಳ ವಿಷಯ ಇದರಲ್ಲಿ ಬರುವುದಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ಹೈದರಾಬಾದ್ ಭಾಗದಿಂದ ಸೆಕ್ರೆಟೇರಿಯಟ್ಟಿಗೆ ಬಂದಿರುವ ರಿಕಾರ್ಡುಗಳು ಉರ್ದು ಭಾಷೆಯಲ್ಲಿವೆ. ಅವನ್ನು ಭಾಷಾಂತರ ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಮಗೆ ಬಂದಿರುವ ಫೈಲುಗಳನ್ನು ಭಾಷಾಂತರ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಉರ್ದು ಭಾಷೆ ರಾಷ್ಟ್ರಭಾಷೆಗಳಲ್ಲಿ ಒಂದು ಭಾಷೆಯಲ್ಲವೆ?

ಅಧ್ಯಕ್ಷರು.—ಆ ಪ್ರಶ್ನೆ ಇದರೊಳಗೆ ಬರುವುದಿಲ್ಲ. Question time is over.

Members' Representations.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಒಂದು ವಿಚಾರವಿದೆ. ಪ್ರಶ್ನೋತ್ತರ ಕಾಲದಲ್ಲಿ ಈಗಿನ ರೀತಿಯಲ್ಲಿ ಹೋದರೆ ನಾವು ಕಳುಹಿಸಿರತಕ್ಕ ಪ್ರಶ್ನೆಗಳು ಯಾವಾಗ ಬರುತ್ತವೆಯೋ ಗೊತ್ತಾಗುವುದಿಲ್ಲ. ಹಿಂದೆ ನಮಗೆ ಗೊತ್ತಿರುವಂತೆ ಶ್ರೀಮಾನ್ ಎಚ್. ಸಿದ್ದಯ್ಯನವರು ಮತ್ತು ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ಅಧ್ಯಕ್ಷರಾಗಿದ್ದಾಗ ಒಂದು ದಿವಸಕ್ಕೆ 25-30 ಪ್ರಶ್ನೆಗಳನ್ನು ಮುಗಿಸುತ್ತಿದ್ದರು. Today we are able to finish only three or four questions.

Mr. SPEAKER.—I am not to be blamed for that. I have tried my level best to skip over questions as early as possible. But members are insisting on putting supplementaries. That is why in the new Rules we are going to change the whole procedure. The new Rules will come before the House and after their adoption there will be no difficulty.

Sri K. PUTTASWAMY (Mysore).—I appeal to you, Sir, in all humility that you may be pleased to say when we will be able to adopt the new Rules so that we may remove these difficulties.

Mr. SPEAKER.—There is a misunderstanding on the part of the Hon'ble Member and it has arisen on account of the fact that he is not a member of the present committee. The Committee is going to finish its labours quickly and I will see that the whole Report is placed before the House by the time this House adjourns.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಸ್ವಾಮಿ, ಪ್ರತಿನಿತ್ಯವೂ ರಾತ್ರಿ 8-8½ ಗಂಟೆಯವರೆಗೆ ಸಭೆ ಕುಳಿತುಕೊಳ್ಳಬೇಕಾದರೆ, ಕಡೆಯಪಕ್ಷ ಸಭೆಯಲ್ಲಿ ಇರಬೇಕಾದಂಥ ಅಲ್ಪಸಂಖ್ಯೆಯಾದ 21 ಜನ ಮಾನ್ಯ ಸದಸ್ಯರು ಇರುವ ಹಾಗೆ ಮಾಡುವುದು ಕಷ್ಟವಾಗುತ್ತದೆ. ಅದಕ್ಕೋಸ್ಕರ ತಾವು ಏಳು ಗಂಟೆಯೊಳಗೆ ಸಭೆಯ ಕಾರ್ಯಕಲಾಪಗಳನ್ನು ಆಗಮಾಡಿಸಬೇಕೆಂದು ತಮ್ಮನ್ನು ಕೇಳುತ್ತೇನೆ.

ಅಧ್ಯಕ್ಷರು.—ಎಲ್ಲ ನನ್ನ ಕಡೆಗೆ ಇಲ್ಲ, ಮೊದಲು ಪಟ್ಟಿಯನ್ನು ಕೊಡುವವರು, ಇಬ್ಬರೂ ಸೇರಿ, 25 ಜನರ ಹೆಸರನ್ನು ಕೊಡುತ್ತೀರಿ.. ಅದಕ್ಕೆ ಕಾಲ ಜಾಸ್ತಿಬೇಕಾಗುತ್ತದೆ. ಪ್ರತಿಯೊಬ್ಬರೂ ಮಾತನಾಡಬೇಕೆಂದು ಹೇಳುತ್ತಾರೆ. ಅದರಿಂದ ಬಹಳಕಾಲ ಹಿಡಿಯುತ್ತದೆ. 8-8½ ಗಂಟೆಯವರೆಗೆ ನನಗೆ ಕೂಡಲಿಕ್ಕೆ ಸಮಾಧಾನವಿದೆ, ಸಂತೋಷವಿದೆ ಎಂದಲ್ಲ. ಮಾತನಾಡುವ ಸದಸ್ಯರು ಸ್ವಲ್ಪ ಕಡಮೆ ಜನ ಇದ್ದರೆ ಬೇಕಾದ ಹಾಗೆ ಕೆಲಸ ಮಾಡಬಹುದು. ಒಂದೊಂದು ಕಡೆಯಿಂದಲೂ 12-12 ಜನರ ಪಟ್ಟಿ ಬಂದರೆ ಹೇಗೆ ಮಾಡುವುದು? ನಿನ್ನೆಯ ದಿನ ಏಳೂಕಾಲು ಗಂಟೆಯವರೆಗೂ ಕುಳಿತಿದ್ದರೂ ಕೂಡ 15 ಜನರು ಮಾತನಾಡಲು ನಿಂತಿದ್ದರು. ಅಂಥದರಲ್ಲಿ ಬಹಳ ಕಷ್ಟವಾಗುತ್ತದೆ. ಆರೂವರೆಗಂಟೆ ಮೇಲೆ ಕುಳಿತುಕೊಳ್ಳಲು ನಾನು ಅಭಿಪ್ರಾಯಪಡುವುದಿಲ್ಲ.